ಗುದ್ದುಗಳನ್ನು ತಪ್ಪಿಸಿಕೊಳ್ಳುವುದು ನನ್ನ ಉದ್ದೇಶ. ಆದರೆ ಅವರ ಕಿವಿ ಚುರುಕು. 'ತಮ್ಮಾ ಇನ್ನೊಮ್ಮೆ ಓದು, ಅದ್ಯಾಕೊ ಇಂಪಾರ್ಟೆಂಟು ಅನ್ನಿಸ್ತದ' ಎನ್ನುತ್ತಿದ್ದರು. ನಾನು ಇನ್ನೊಮ್ಮೆ ಓದಿದೆ. ಮತ್ತೆ ಬೆನ್ನಿಗೆ ಪ್ರೀತಿಯ ಇನ್ನೊಂದು ಗುದ್ದು ಬಿತ್ತು. ಗೆಳೆಯರು ಮುಸಿ ಮುಸಿ ನಗುತ್ತಿದ್ದರು. ಮುಂದಿನವಾರ, ಇನ್ನೊಂದು ಐಡಿಯಾ ಮಾಡಿದೆ. ಅವರ ಗುದ್ದು ಬೆನ್ನಿಗೆ ತಾಕದಂತೆ ಅಂತರ ಕಾಪಾಡಿಕೊಂಡೆ. ಆಕರ್ಷಕವಾದ ಸಾಲಿಗೆ ಅವರ ಕೈ ತೂರಿಬಂತಾದರೂ ನನ್ನ ಬೆನ್ನಿಗೆ ಅಪ್ಪಳಿಸಲಿಲ್ಲ. ಅದು ಗಾಳಿಯಲ್ಲಿಯೇ ತೇಲಿ ಸ್ವಸ್ಥಾನಕ್ಕೆ ಮರಳಿತು. ಮನಸ್ಸಿನಲ್ಲಿಯೇ ನನ್ನ ಯೋಜನೆ ಸಫಲವಾಗಿದ್ದಕ್ಕೆ ಕೊಂಚ ಗೆಲುವಾಗಿದ್ದೆ. ಇದೇ ಖುಷಿಯಲ್ಲಿ ಕವಿತೆಯನ್ನು ಇನ್ನಷ್ಟು ಆಕರ್ಷಕವಾಗಿ ಓದಿದೆ. ಮತ್ತೊಂದು ಹೊಸ ಕವಿತೆಯನ್ನು ಆಕರ್ಷಕವಾಗಿ ಓದತೊಡಗಿದೆ. ಬೆನ್ನಿಗೆ ಇನ್ನೊಂದು ಗುದ್ದು ಬಿತ್ತು. ಅಂತರ ಕಾಯ್ದುಕೊಂಡರೂ ಇದ್ಯಾಕೆ ಹೀಗಾಯ್ತು ಅಂತ ನೋಡಿದರೆ, ಅವರು ಯಾವಾಗಲೊ ಸರಿದು ನನ್ನ ಪಕ್ಕವೇ ಬಂದು ಕುಳಿತಿದ್ದರು. 'ವಾಹ್ ತಮ್ಮಾ ವಾಹ್, ಎಂಥ ಕವಿತೆ ಅಬಬಬಾ' ಅಂತ ತಮ್ಮ ತಲೆ ಝಾಡಿಸಿ ಕೂದಲನ್ನು ಅತ್ತಿತ್ತ ಹೊರಳಾಡಿಸಿದರು. ನಾನು ಬೆನ್ನು ತುರಿಸಿಕೊಂಡು ಅಂಗೈಯಿಂದ ಒತ್ತಿಕೊಂಡೆ. ಅಲ್ಲಿ ಯಾವ ಅಂತರವೂ ಕೆಲಸಕ್ಕೆ ಬರದೇ ಹೋಯಿತು.

ದಷ್ಟಪುಷ್ಟವಾಗಿದ್ದ ನನ್ನ ಗುರುಗಳು ಕೊನೆಯ ದಿನಗಳಲ್ಲಿ ಪೂರ್ಣ ಇಳಿದುಹೋಗಿದ್ದರು. ಅವರ ಶರೀರ ಸಂಪೂರ್ಣ ಹಣ್ಣಾಗಿತ್ತು. ಸಕ್ಕರೆ ಕಾಯಿಲೆಯಿಂದ ಕಣ್ಣಿನ ದೃಷ್ಟಿ ಕಡಿಮೆಯಾಗಿತ್ತು. ಕ್ಯಾನ್ಸರ್ ರೋಗಕ್ಕೆ ಒದ್ದಾಡಿಹೋಗಿದ್ದರು. ಜಾಂಡೀಸ್ ರೋಗ ಬಂದು ಮತ್ತಷ್ಟು ಕಷ್ಟಕ್ಕೊಳಗಾದರು. ಇಡೀ ಶರೀರ ಹಳದಿ ಬಣ್ಣಕ್ಕೆ ತಿರುಗಿತ್ತು. ಅವರ ಹೆಂಡತಿ ಬಂದು ವಾಲೀಕಾರರ ಅವಸ್ಥೆಯನ್ನು ದುಃಖದಿಂದ ಹೇಳಿಕೊಂಡರು. ವಾಲೀಕಾರರನ್ನು ಮುಟ್ಟಿದರೆ ಅರಿಷಿಣದ ಬಣ್ಣ ನಮ್ಮ ಅಂಗೈಗೆ ಮೆತ್ತಿಕೊಳ್ಳುತ್ತಿತ್ತು. ಜಾಂಡೀಸ್ ಇಡೀ ದೇಹವನ್ನು ಆವರಿಸಿಕೊಂಡಿತ್ತು. ಅವರ ಬಲಿಷ್ಠ ಕೈಗಳು ಕೂಸಿನ ಕೈಗಳಂತಾಗಿದ್ದವು. ನಾವು ಕಿವಿಯಲ್ಲಿ ಹೆಸರು ಹೇಳಿದರೆ ಮಾತ್ರ ತಮ್ಮ ಗುಬ್ಬಿಯಂಥ ಕಣ್ಣುಗಳನ್ನು ಸ್ವಲ್ಪವೇ ಅಗಲಿಸಿ ಕ್ಷೀಣ ದನಿ ಹೊರಡಿಸಿ ಗೆಲುವಾಗುತ್ತಿದ್ದರು. ನನ್ನ ಈ ಗುರುವನ್ನು ಸ್ವಲ್ಪ ಖುಷಿಪಡಿಸೋಣವೆಂದು ಪಕ್ಕವೇ ಕೂತು ಕಿವಿಯಲ್ಲಿ ಒಂದೆರಡು ಕವಿತೆಗಳನ್ನು ಆಕರ್ಷಕವಾಗಿ ಓದಿದೆ. ಅವರು ಕಣ್ಣುಮುಚ್ಚಿಕೊಂಡು ಕೇಳಿಸಿಕೊಳ್ಳುತ್ತಿದ್ದರು. ನಾನು ಎಷ್ಟೇ ಆಕರ್ಷಕವಾಗಿ ಓದಿದರೂ ಬೆನ್ನಿಗೆ ಗುದ್ದುಗಳನ್ನು ಹಾಕಲಿಲ್ಲ. ಗುದ್ದುಗಳು ಬಿದ್ದರೂ ನನಗೆ ನೋವಾಗುತ್ತಿರಲಿಲ್ಲ. ಖುಷಿಯೇ ಆಗುತ್ತಿತ್ತು. ಯಾಕೆಂದರೆ ನರಪೇತಲಿನಂತಿದ್ದ ನಾನು ಈಗ ಕೊಂಚ ಮಾಂಸವನ್ನು ತುಂಬಿಕೊಂಡು ದಷ್ಟಪುಷ್ಟನಾಗಿದ್ದೆ. ಆದರೆ ಗುದ್ದು ಬೀಳುವ ಸಾಧ್ಯತೆಯೇ ಇರಲಿಲ್ಲ. ಯಾಕೆಂದರೆ ತಮ್ಮ ಕೈಯನ್ನು ಎತ್ತಿ ನನ್ನ ಬೆನ್ನಿಗೆ ಗುದ್ದುವಷ್ಟು ತ್ರಾಣ ಈಗ ವಾಲೀಕಾರರಲ್ಲಿ ಉಳಿದಿರಲಿಲ್ಲ. ಗುದ್ದುಗಳು ಬೀಳದೆಯೂ ನನಗೆ ಎದೆಯಲ್ಲಿ ಸಂಕಟವಾಯಿತು. ಈ ಹಿಂದೆ ಅವರ ಗುದ್ದುಗಳನ್ನು ತಪ್ಪಿಸಿಕೊಳ್ಳಲು ಮಾಡುತ್ತಿದ್ದ ಪೇಚಾಟ ನೆನಪಾಗಿ ಮನಸ್ಸು ತಳಮಳಿಸಿತು.

ಒಂದೆರಡು ತಿಂಗಳ ತರುವಾಯ ಅವರು ಆಸ್ಪತ್ರೆಗೆ ದಾಖಲಾಗಿದ್ದರು. ನೋಡಿಬರೋಣವೆಂದು ಆಸ್ಪತ್ರೆಗೆ ಹೋದೆ. ವಾಲೀಕಾರರು ಸಂಕಟದಿಂದ ಚೀರಾಡುತ್ತಿದ್ದರು. ಆಸ್ಪತ್ರೆಯ ದಾದಿಯರು ಅವರ ಕೈಕಾಲುಗಳನ್ನು ಮಂಚಕ್ಕೆ ಕಟ್ಟಿಹಾಕಿದ್ದರು. ಇಂಜೆಕ್ಷನ್ ಕೊಡುವುದೇ ದೊಡ್ಡ ಸಾಹಸದ ಕೆಲಸವಾಗಿತ್ತು. 'ತಮ್ಮಾ ನಾನಿಲ್ಲಿ ಇರಂಗಿಲ್ಲ, ಮನಿಗೊಯ್ರಿ ಮನಿಗೊಯ್ರಿ' ಅಂತ ಚಿಕ್ಕಮಕ್ಕಳಂತೆ ಅಳತೊಡಗಿದರು. ಬಂದವರೆಲ್ಲರ ಎದುರು ಅವರದು ಇದೇ ಬೇಡಿಕೆ. ಅವರ ಅಕ್ಕನ ನೆನಪಾಯಿತೇನೊ; 'ಅಕ್ಕಾ ಅಕ್ಕಾ ಅಕ್ಕಾ' ಅಂತ ಕೂಗುತ್ತಿದ್ದರು. ನಾನು ಭಾರವಾದ ಮನಸ್ಸಿನಿಂದ ಮನೆಗೆ ತಲುಪಿದೆ. ಒಂದೆರಡು ಗಂಟೆಯಲ್ಲಿಯೇ ಅವರ ಹೆಂಡತಿ ಸಿದ್ದಮ್ಮ ಅವರ ಫೋನ್ ಬಂತು. 'ತಮ್ಮಾ, ನಿಮ್ಮ ಸರ್ ಹೋಗಿಬಿಟ್ರು' ಅಂತ. ನನ್ನ ಗಂಟಲು ತುಂಬಿಬಂತು. ಅವರ ಮನೆಯ ಕಡೆ ಧಾವಿಸಿದೆ. ವಾಲೀಕಾರರ ದೇಹವನ್ನು ಮನೆಗೆ ತಂದಿದ್ದರು. ಹತ್ತಿರ ಹೋಗಿ ನೋಡಿದೆ. ಗುರುಗಳು ಕಣ್ಣುಮುಚ್ಚಿ ಕವಿತೆ ಕೇಳುತ್ತಿರುವಂತೆ ಮಲಗಿದ್ದರು. ಅದು ಎಂದೂ ಮುಗಿಯದ ಕವಿತೆ, ಎಂದೂ ಎಚ್ಚರಗೊಳ್ಳದ ನಿದ್ದೆ. ನಾನು ಈ ಮಹಾನ್ ಗುರುವನ್ನು ನಮಸ್ಕರಿಸಿ ಕಣ್ಣೀರಾಗಿ ನಿಂತೆ.

●